REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 15 | ISSUE - 6 | MARCH - 2026

# ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಮತ್ತು ಮಹಿಳಾ ಉಮ್ಮೇದುವಾರಿಕೆಯ ಕೊರತೆ – ಕಾರಣಗಳು ಮತ್ತು ಪರಿಹಾರಗಳು

ಡಾ. ಹೆಚ್. ಎಮ್. ನಾಟೀಕರ್
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ ಬಾಗೇವಾಡಿ, ವಿಜಯಪುರ ಜಿಲ್ಲೆ, ಕರ್ನಾಟಕ

**ಲೇಖನ ಸಾರಾಂಶ:**

ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಚುನಾವಣೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಕುರಿತು ಚರ್ಚಿಸಲಾಗಿದೆ. ಹಾಗೆಯೇ ಕರ್ನಾಟಕದ ರಾಜಕೀಯದಲ್ಲಿ ಮಹಿಳಾ ಉಮ್ಮೇದುವಾರಿಕೆಯ ಕೊರತೆಗೆ ಕಾರಣವಾಗಿರುವ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ಮಾನವ ಜನಾಂಗದ ಸೃಷ್ಟಿ ಮತ್ತು ಅದರ ಸುಸ್ಥಿರ ಗತಿಯನ್ನು, ಅದರ ಸಹವರ್ತಿ ಪ್ರತಿಕ್ರಿಯೆಗಳನ್ನು ಸಾಕ್ಷತ್ಕರಿಸುವ ಮಹಿಳೆ ರಾಜಕೀಯವಾಗಿ ಬಹಳ ಹಿಂದುಳಿದಿದ್ದಾಳೆ. ವಿಶ್ವದ ಜನಸಂಖ್ಯೆಯ 50% ರಷ್ಟು ಇರುವ ಮಹಿಳೆಯರು ಜಾಗತಿಕ ದುಡಿಮೆಯ 66% ರಷ್ಟನ್ನು ನಿಭಾಯಿಸುತ್ತಿದ್ದಾರೆ. ಆದರೂ ಅವರು ಲಿಂಗ ಸಂಬಂಧಿ ಅಸಮಾನತೆ ಅನುಭವಿಸುತ್ತಾ ರಾಜಕೀಯ ಶ್ರೇಣೀಕರಣಗಳಲ್ಲಿ ಪುರುಷರಿಗಿಂತ ಬಹಳ ಕೆಳಮಟ್ಟದಲ್ಲಿದ್ದಾರೆ. ರಾಜಕೀಯ ಕ್ಷೇತ್ರ ಅಲ್ಲದೇ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿಯೂ ಪ್ರಾತಿನಿಧ್ಯದ ಮತ್ತು ಪಾಲುದಾರಿಕೆಯ ಅಸಮತೋಲನ ಅನುಭವಿಸುತ್ತಿದ್ದಾರೆ. ಪುರುಷರ ದೈಹಿಕ ಬಲಾಡ್ಯತೆ, ಭಾವನಾತ್ಮಕ ಹೆಚ್ಚುಗಾರಿಕೆ, ಅವರಲ್ಲಿನ ಪುರಷರೇ ಶ್ರೇಷ್ಠರು ಎಂಬ ಲೌಕಿಕ ಭಾವನೆ, ಮಹಿಳೆಯರು ಎಂದೆಂದಿಗೂ ನಮ್ಮ ಅಧೀನರು ಎಂಬ ಕುತ್ಸಿತ ಆಲೋಚನೆಗಳೆ ಕಾರಣವಾದರೂ, ಅಧಿಕಾರ ರೂಢ ಆಡಳಿತಾತ್ಮಕ ಸಂಸ್ಥೆಗಳಲ್ಲಿ ಅವಳಿಗೆ ಹೆಚ್ಚಿನ ಪ್ರಾತಿನಿಧ್ಯವಿಲ್ಲದೇ ಇರುವುದೂ ಸಹ ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ಅಸಮಾನತೆಗೆ ಮತ್ತೊಂದು ಮುಖ್ಯ ಕಾರಣ. ಮಹಿಳೆಯರು ಸಾಮೂಹಿಕ ಸ್ವಯಂ ಜಾಗೃತಿಯಿಂದ ಮಾತ್ರ ರಾಜಕೀಯ ಕ್ಷೇತ್ರದಲ್ಲಿ ಬಲ ಸಂವರ್ಧನೆ ಮಾಡಿ ಕೊಳ್ಳಬಹುದು ಎಂಬುದನ್ನು ಅರಿತು ಮಹಿಳೆ ರಾಷ್ಟ್ರದ, ರಾಜ್ಯದ ಮತ್ತು ಸ್ಥಳೀಯ ರಾಜಕೀಯ ಪ್ರಕ್ರಿಯೆಗಳಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಬೇಕು. ಹೀಗೆ ಪಾಲ್ಗೊಳ್ಳುವ ಸಾಮಾಜೋ ಆರ್ಥಿಕ ಅಸಮಾನತೆಗಳು ಮೊದಲು ಕಾನೂನು ರೀತ್ಯ ಕೊನೆಗೊಳ್ಳಬೇಕು. ಭಾರತದ ಪ್ರಜಾಪ್ರಭುತ್ವದ ಮುಖ್ಯ ಸಾಫಲ್ಯತೆ ಮಹಿಳೆಯರ ಸ್ವಯಂ ಜಾಗೃತಿಯ ಮೇಲೆಯೇ ನಿಂತಿದೆ. ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಹೆಚ್ಚಾಗಬೇಕು ಎಂಬ ಕೂಗು ಮಹಿಳಾ ದಿನಾಚರಣೆಗಳಿಗೋ ಅಥವಾ ಮಹಿಳಾ ವೇದಿಕೆಗಳ ಘೋಷಣೆಗಳಾಗದೆ ನೈಜ ರೂಪದಲ್ಲಿ ಜಾರಿ ಗೊಳ್ಳ ಬೇಕು. ಇದಕ್ಕೆ ಸಂಘಟಿತವಾದ ಸಾಮೂಹಿಕ ಜಾಗೃತಿ ಅಗತ್ಯ.



**ಕೀಲೀ ಪದಗಳು:** ಮಹಿಳೆಯರ ಪ್ರಾತಿನಿಧ್ಯ, ಮಹಿಳಾ ಉಮ್ಮೇದುವಾರಿಕೆ, ರಾಜಕೀಯ, ಕಾರಣಗಳು ಮತ್ತು ಪರಿಹಾರಗಳು.

## ಪೀಠಿಕೆ:

ಪ್ರಸ್ತುತ ಭಾರತದ ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ರಾಜಕೀಯದಲ್ಲಿ ಭಾಗವಹಿಸುವಿಕೆ ಜನಸಂಖ್ಯಾ ದೃಷ್ಟಿಯಿಂದ ಅತ್ಯಂತ ಕಡಿಮೆ ಇದ್ದು ಸರ್ಕಾರಗಳು ಹಲವು ಕ್ರಮಗಳ ಮೂಲಕ ಮಹಿಳಾ ಸಹಭಾಗಿತ್ವವನ್ನು ಹೆಚ್ಚಿಸಲು ಕ್ರಮ ಕೈಗೊಂಡಿದೆಯದರೂ ಅದು ಸಫಲವಾಗಿಲ್ಲ.

## ಮಹಿಳೆಯರ ಪ್ರಾತಿನಿಧ್ಯ–ಚುನಾವಣೆಗಳಲ್ಲಿ ಮಹಿಳೆಯರು:

ಹಿಂದಿನ ರಾಷ್ಟ್ರೀಯ ಚುನಾವಣೆಗಳ ಅಂಕಿ ಅಂಶವನ್ನು ಆಧರಿಸಿ ಹೇಳುವುದಾದರೆ ಭಾರತದ ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೇವಲ ಶೇ 11.7%, ಕರ್ನಾಟಕದಲ್ಲಿ ವಿಧಾನ ಸಭೆಯ ಮಹಿಳೆಯರ ಸ್ಥಾನಮಾನ ಶೇ 1.3%. 2011ರ

ಜನಗಣತಿಯನ್ನು ಆಧರಿಸಿ ಹೇಳುವುದಾದರೆ ಭಾರತ ಮಹಿಳಾ ಸಾಕ್ಷರತೆಯ ಪ್ರಮಾಣ ಶೇ 65%. ಪುರುಷರಲ್ಲಿ ಸಾಕ್ಷರತೆಯ ಪ್ರಮಾಣ ಶೇ 82%. ಕೆಲವು ಜನಾಂಗಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ಮಹಿಳೆಯರಿಗೆ ಶಿಕ್ಷಣ ಕುರಿತು ಈಗಲೂ ಕೆಲವು ಶೈಕ್ಷಣಿಕ ಕಟ್ಟು ಪಾಡುಗಳು ಮತ್ತು ಕಟ್ಟಪ್ಪಣೆಗಳಿವೆ. ಭಾರತಕ್ಕೆ ಜಾಗತಿಕ ಶ್ರೇಣಿಯಲ್ಲಿ ರಾಜಕೀಯವಾಗಿ 17ನೇ ಸ್ಥಾನ, ಶೈಕ್ಷಣಿಕವಾಗಿ 121ನೇ ಸ್ಥಾನ, ಆರೋಗ್ಯದಲ್ಲಿ 134ನೇ ಸ್ಥಾನ ಮತ್ತು ಆರ್ಥಿಕ ಸ್ಥಾನಮಾನದಲ್ಲಿ 123ನೇ ಸ್ಥಾನ, ಆರೋಗ್ಯ ಆರ್ಥಿಕ ರಾಜಕೀಯ ಶೈಕ್ಷಣಿಕ ವಿಷಯಗಳನ್ನೊಳಗೊಂಡ ಸಮಗ್ರ ಶ್ರೇಣಿಯಲ್ಲಿ ಭಾರತ 105 ನೇ ಶ್ರೇಣಿಯಲ್ಲಿದೆ. ಅಂದರೆ ಭಾರತವು ಜಾಗತಿಕ ಮಟ್ಟದ ಶ್ರೀಣೀಗಳಲ್ಲಿ ಬಹಳವೇ ಹಿಂದಿರುವುದು ವೇದ್ಯವಾಗಿದೆ.

## ಮಹಿಳಾ ಶೋಷಣೆಯ ವಿಶ್ವ ಸಂಸ್ಥೆಯ ವರದಿಗಳ ಮಾಹಿತಿ:

ವಿಶ್ವ ಸಂಸ್ಥೆಯ ವರದಿಯ ಪ್ರಕಾರ ವಿಶ್ವಾದ್ಯಂತ 35% ಮಹಿಳೆಯರು ಶಾರೀರಿಕ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಲೈಂಗಿಕ ದೌರ್ಜನ್ಯ ಅನುಭವಿಸುತ್ತಿರುವ ಅಸಂಖ್ಯಾತ ಮಹಿಳೆಯರು ಗುರುತರವಾದ ಹಾಗೂ ವಾಸಿಯಾಗದ ಖಾಹಿಲೆಗಳಿಗೆ ತುತ್ತಾಗುತ್ತಿದ್ದಾರೆ, ಇದಲ್ಲದೇ ಮಾನಸಿಕವಾಗಿ ಶೋಷಿಸಲ್ಪಡುತ್ತಿರುವ ಮಹಿಳೆಯರ ಸಂಖ್ಯೆ 45%ಕ್ಕೆ ಏರಿದೆ. ಜಗತ್ತಿನಾದ್ಯಂತ ಸುಮಾರು 88% ರಷ್ಟು ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಮತ್ತು ಹಿಂಸೆಯನ್ನು ಅನುಭವಿಸುತ್ತಿರುತ್ತಾರೆ ಸುಮಾರು 35% ರಷ್ಟು ಮಹಿಳೆಯರು ಮಾನವ ಕಳ್ಳ ಸಾಗಾಣಿಕೆಯ ಬಲಿಪಶು ವಾಗಿದ್ದಾರೆ. ಹತ್ತರಲ್ಲಿ ಒಬ್ಬ ಮಹಿಳೆ ಸೈಬರ್ ಜಾಲದ ಶೋಷಣೆಗೆ ಒಳಗಾಗುತ್ತಿದ್ದಾಳೆ. ಅಂದರೆ ಸಭ್ಯತೆಯ ಎಲ್ಲಾ ಎಲ್ಲೆಗಳನ್ನು ಮೀರಿದ ಇ–ಮೇಲುಗಳು. ಮೆಸೇಜುಗಳು ವಿಡಿಯೋಗಳು ಮತ್ತು ಕ್ರಿಮಿನಲ್ ರೀತಿಯ ಬಳಕೆಗೆ ಆಕೆ ಒಳಗಾಗುತ್ತಿದ್ದಾಳೆ. ಜಗತ್ತಿನಾದ್ಯಂತ ಸುಮಾರು 246 ಮಿಲಿಯನ್ ಹೆಣ್ಣು ಮಕ್ಕಳು ಶಾಲೆಯ ಶೌಚಾಲಯ ಮತ್ತು ಸಾರ್ವಜನಿಕ ಸ್ಥಳಗಳ ಶೌಚಾಲಯದಲ್ಲಿ ತಮಗೆ ಅಸುರಕ್ಷತೆ ಇದೆ ಎಂದು ಹೇಳಿದ್ದಾರೆಂದು ವಿಶ್ವಸಂಸ್ಥೆಯ ಅಧ್ಯಯನ ವರದಿಯೊಂದು ತಿಳಿಸಿದೆ. ಇಂತಹ ಮಹಿಳಾ ಸಂಬಂಧಿ ಶೋಷಣೆಯನ್ನು ತಡೆಗಟ್ಟಲು ಮಹಿಳೆಯು ರಾಜಕೀಯವಾಗಿ ಬಲಗೊಂಡು, ಚುನಾವಣಾ ಪ್ರಕ್ರಿಯೆಗಳಲ್ಲಿ ಭಾಗವಹಿಸಿ, ಆಡಳಿತದ ಚುಕ್ಕಾಣಿ ಹಿಡಿಯುವುದು ಅತೀ ಅವಶ್ಯ ಎಂದು ಈ ವರದಿ ತಿಳಿಸಿದೆ. ದೇಶಗಳು ಮಹಿಳೆಯರ ಸರ್ವತೋಮುಖ ಅಬಿವೃದ್ಧಿಗೆ ಪೂರಕವಾಗುವ ಸಧೃಡ ಕಾನೂನುಗಳನ್ನು ಜಾರಿಗೆ ತಂದು ಅವುಗಳ ಅನುಷ್ಠಾನ ಹಂತಗಳನ್ನು ಪರಿವೀಕ್ಷಿಸಿ ಅಭಿವೃದ್ದಿಗೆ ತಡೆ ವುಂಟಾಗಿರುವ ಅಂಶಗಳನ್ನು ತೊಡೆದು ಹಾಕಬೇಕು ಎಂದು ವರದಿ ತಿಳಿಸಿದೆ.

## ಲಿಂಗ ಸಂಬಂದಿ ಅಸಮಾನತೆ:

ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕೆಲವು ದೇಶಗಳಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಮತ್ತು ಸಹಭಾಗಿತ್ವ ಕುರಿತು ನಿಟ್ಟಿನಲ್ಲಿ ಅನೇಕ ಕ್ರಮಗಳನ್ನು ತೆಗೆದು ಕೊಂಡು ಅಸಮತೋಲನವನ್ನು ಸರಿಪಡಿಸಲು ರಾಜಕೀಯ ಪ್ರಾತಿನಿಧ್ಯ ನಿಡುವತ್ತ ಗಮನ ಕೊಟ್ಟಿದ್ದರೂ ಭಾರತ ದೇಶ ಮಾತ್ರ ಇಂತಹ ಅಸಮತೋಲನದ ಅಭಿಜಾತ ಕೇಂದ್ರವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರುವಿವಿಧ ರಂಗಗಳಲ್ಲಿ ತಮ್ಮ ಸ್ವಾಪೋಜ್ಞತೆಯನ್ನೂ, ಯಶಸ್ವೀ ಪ್ರಾತಿನಿಧಿಕ ಅಸ್ತಿತ್ವವನ್ನೂ ತೋರಿಸಿದ್ದರೂ ಭಾರತದಲ್ಲಿ ರಾಜಕೀಯ ಪ್ರವೇಶ ಮತ್ತು ಪ್ರಾತಿನಿಧ್ಯಗಳ ವಿಷಯಗಳಲ್ಲಿ ಮಹಿಳೆಯರಿಗೆ ಅಸಮಾನತೆಯ ಛಾಪು ಎದ್ದು ಕಾಣುತ್ತಿದೆ. ಮಹಿಳೆಯರು ಅನುಭವಿಸುತ್ತಿರುವ ಈ ಕಷ್ಟ ಕಾರ್ಪಣ್ಯಗಳಿಗೆ ಹಲವಾರು ಆಡಳಿತಾತ್ಮಕ ವೈಫಲ್ಯತೆಗಳನ್ನು ಮೂಲ ಕಾರಣವಾಗಿ ಕಾಣಬಹುದು. ಮಹಿಳೆಯರ ರಕ್ಷಣೆಗೆ ಇರುವ ಕಾನೂನುಗಳೆಲ್ಲವೂ ಬರಿಯ ಕಾಗದದ ಮೇಲಿರುವ ಕಾನೂನುಗಳಾಗಿದ್ದು ನಿರೀಕ್ಷಿತ ಮಟ್ಟದಲ್ಲಿ ಮಹಿಳೆಯರಿಗೆ ಸಂರಕ್ಷಣೆ ಒದಗಿಸುವಲ್ಲಿ ವಿಫಲವಾಗಿದೆ. ಇದರಿಂದ ಮಹಿಳೆಯರು ತಮ್ಮ ರಕ್ಷಣೆಗೆ ಕಾನೂನುಗಳಿವೆ ಎಂದು ತಿಳಿದಿದ್ದರೂ ಅವುಗಳನ್ನು ಸಕಾಲದಲ್ಲಿ ಮತ್ತು ಸಮರ್ಪಕವಾಗಿ ಬಳಸಿಕೊಳ್ಳಲು ಹಿಂಜರಿಯುವಂತಾಗಿದೆ. ಭಾರತದ ಕಾನೂನಿನ ಚೌಕಟ್ಟಿನೊಳಗೆ ದುರುಳರು ತಪ್ಪಿಸಿಕೊಳ್ಳಲು ಹಲವಾರು ಸಡಿಲತೆಗಳಿದ್ದು ಮಹಿಳೆಯು ಆಡಳಿತಾತ್ಮಕ ಹೋರಾಟದಿಂದ ಹಿಂದೆ ಸರಿಯಲು ಇದೂ ಒಂದು ಕಾರಣವಾಗಿದೆ. ಸ್ತ್ರೀಯರನ್ನು ಅತ್ಯಂತ ಪೂಜ್ಯ ಭಾವದಿಂದ ನೋಡಿದ ಭಾರತದಲ್ಲಿ ಹೆಣ್ಣು ಮಗುವಿನ ಜೀವನ ಬಹಳ ಆತಂಕಕಾರಿ ಮಟ್ಟಕ್ಕೆ ಏರಿದೆ ಭ್ರೂಣ ಹತ್ಯೆ ಅತ್ಯಾಚಾರ ದೌರ್ಜನ್ಯ ಮುಂತಾದ ಅನಾಚಾರಗಳು ಅವ್ಯಾಹತವಾಗಿ ನಡೆಯುತ್ತಿವೆ. ಮಹಿಳೆ ಸ್ವಭಾವತಃ ಕೋಮಲೆ, ಅವಳ ನಯ, ವಿನಯ, ಸಂಪನ್ನತೆಯನ್ನು ಅವಳ ಮೇಲೆ ಹಿಡಿತ ಸಾಧಿಸಲು ಬಳಸಿಕೊಂಡಿರುವುದು ಇತಿಹಾಸ ವೇದ್ಯವಾದ ವಿಷಯ. ಅವಳಲ್ಲಿನ ಹಿಂಜರಿತಕ್ಕೆ ಸಾಮಾಜಿಕವಾಗಿ ಪುರುಷರ ದೈಹಿಕ ಬಲಾಢ್ಯತೆ, ಭಾವನಾತ್ಮಕ ಹೆಚ್ಚುಗಾರಿಕೆ, ಅವರಲ್ಲಿನ ಪುರಷರೇ ಶ್ರೇಷ್ಠರು ಎಂಬ ಲೌಕಿಕ ಭಾವನೆ, ಮಹಿಳೆಯರು ಎಂದೆಂದಿಗೂ ನಮ್ಮ ಅಧೀನರು ಎಂಬ ಕುತ್ಸಿತ ಆಲೋಚನೆಗಳೆ ಕಾರಣವಾದರೂ, ಅಧಿಕಾರ ರೂಢ ಆಡಳಿತಾತ್ಮಕ ಸಂಸ್ಥೆಗಳಲ್ಲಿ ಅವಳಿಗೆ ಹೆಚ್ಚಿನ ಪ್ರಾತಿನಿಧ್ಯವಿಲ್ಲದೇ ಇರುವುದೂ ಮತ್ತೊಂದು ಮುಖ್ಯ ಕಾರಣ.

## ಚುನಾವಣೆಗಳಲ್ಲಿ ಮಹಿಳೆಯರು– ಮತದಾನ:

ಚುನಾವಣೆಗಳಲ್ಲಿ ಭಾರತೀಯ ಮಹಿಳೆಯರು ಸ್ವಯಂ ಜಾಗೃತಿಯಿಂದ ಮತದಾನ ಮಾಡುವುದು ಇಂದಿನ ಅವಶ್ಯಕತೆಯಾಗಿದೆ. ಮಹಿಳೆಯರ ಸಮಸ್ಯೆಗಳು ಕೇವಲ ಮಹಿಳೆಗೆ ಮಾತ್ರ ಅರ್ಥವಾಗಬಲ್ಲದು. ಮತ್ತು ಮಹಿಳೆಯರ ರಾಜಕೀಯ ಬೆಳವಣಿಗೆಯ ತೊಡಕುಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಪರಿಹರಿಸಲು ಮಹಿಳೆಯರೇ ನಾಯಕತ್ವ ವಹಿಸಿಕೊಂಡು

ಮುಂದಾಗಬೇಕು. ಸಾಕ್ಷರತೆ, ಸಾಮಾಜಿಕ ಶೋಷಣೆ, ಆರ್ಥಿಕ ಅಸಮಾನತೆ, ಧಾರ್ಮಿಕ ಮೊದಲಾದ ವಿಷಯಗಳಲ್ಲಿ ಮಹಿಳೆಯರು ಅನುಭವಿಸುವ ಸಮಸ್ಯೆಗಳನ್ನು ಆಲಿಸಲು ಮಹಿಳಾ ಪ್ರಾತಿನಿಧ್ಯ ಅವಶ್ಯಕವೂ, ಪ್ರಜಾಪ್ರಭುತ್ವದ ಮೂಲ ಆಶಯವೂ ಆಗಿದೆ. ಭಾರತೀಯ ರಾಷ್ಟ್ರೀಯ ಚುನಾವಣೆಗಳಲ್ಲಿ ಮಹಿಳೇಯರ ಶೇಕಡಾವಾರು ಪಾಲ್ಗೊಳ್ಳುವಿಕೆ ಅತ್ಯಂತ ನಿಧಾನ ಗತಿಯಲ್ಲಿ ಏರುತ್ತಿದೆ. ನಗರ ಪ್ರದೇಶದಲ್ಲಿ ಮತದಾನ ಮಾಡುವ ಮಹಿಳೆಯರಿಗಿಂತ ಗ್ರಾಮೀಣ ಭಾಘದಲ್ಲಿ ಮತದಾನದಲ್ಲಿ ಪಾಲ್ಗೊಳ್ಳುವ ಮಹಿಳೆಯರ ಸಂಖ್ಯೆಯೇ ಹೆಚ್ಚು. ಇದಕ್ಕೆ ಹಲವಾರು ಕಾರಣಗಳು ಇದ್ದು ಹಣದ ಆಮಿಷಗಳು, ಆರ್ಥಿಕ ಕಾಮನೆಗಳು, ಲೋಕೋತ್ತರ ಅಪೇಕ್ಷೆಗಳು, ಕ್ಷಣಿಕಲಾಲಸೆಗಳು ಕಾರಣವಾಗಿದೆಯಾದರೂ ಸುಶಿಕ್ಷಿತರು ಹೆಚ್ಚಾಗಿರುವ ನಗರ ಪ್ರದೇಶಗಳಲ್ಲಿ ಮತದಾನದಲ್ಲಿ ಪಾಲ್ಗೊಳ್ಳುವ ಮಹಿಳೆಯರ ಸಂಖ್ಯೆ ಹೇಳಿ ಕೊಳ್ಳುವಂತಿಲ್ಲ.

### ರಾಜಕೀಯ ವ್ಯವಸ್ಥೆಯ ಒಳ ಹರಿವುಗಳ ಕುರಿತು ಜ್ಞಾನ:

ಮಹಿಳೆಯು ದೈನಂದಿನ ಜೀವನದಲ್ಲಿ ಅನುಭವಿಸುತ್ತಿರುವ ಹಲವಾರು ಸಮಸ್ಯೆಗಳ ಮೂಲ ಮಹಿಳೆಗೆ ಆಡಳಿತಾತ್ಮಕ ಮತ್ತು ರಾಜಕೀಯ ಹಕ್ಕುಗಳ ಕುರಿತು ನಿರ್ದಿಷ್ಟ ಮಾಹಿತಿ ಇಲ್ಲದಿರುವುದು ಸಹ ಒಂದು. ಮಹಿಳಾ ಮತ್ತು ಮಕ್ಕಳ ಸುರಕ್ಷತೆಗೆ ಇರುವ ಕಾನೂನುಗಳ ಅರಿವು ನಗರ ಮತ್ತು ಗ್ರಾಮೀಣ ಮಹಿಳೆಯರಿಗೆ ಇಲ್ಲ. ಕಾರ್ಮಿಕ ಕಾನೂನುಗಳ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಇಲ್ಲ. ಕೆಲಸದ ಸ್ಥಳಗಳಲ್ಲಿ ಲೈಂಗಿಕ ಮತ್ತು ಶಾರೀರಿಕ ಶೋಷಣೆಯನ್ನು ತಡೆ ಗಟ್ಟಲು ಸರ್ಕಾರ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ಹೆಚ್ಚಿನ ಸಂಖ್ಯೆಯ ಮಹಿಳೆಯರಿಗೆ ಸೂಕ್ತ ಮಾಹಿತಿ ಇಲ್ಲ. ಅತ್ಯಂತ ದುರ್ಬಲ ಮತ್ತು ಕೆಳ ವರ್ಗದ ಮಹಿಳೆಯರ ಸ್ಥಿತಿಗತಿಗಳಂತೂ ಯಾವ ರಾಜಕೀಯ ಪಕ್ಷಗಳ ಸಿನಿಮೀಯ ಘೋಷಣೆಗಳಿಂದಲೂ ಪ್ರಗತಿ ಕಂಡಿಲ್ಲ. ಅವಳಲ್ಲಿ ಆತ್ಮ ವಿಶ್ವಾಸ ಜಾಗೃತವಾಗಬೇಕಾದರೆ ಅವಳು ಪ್ರಸ್ತುತ ರಾಜಕೀಯ ವ್ಯವಸ್ಥೆಯ ಒಳ ಹರಿವುಗಳನ್ನು ಅರಿಯ ಬೇಕಿದೆ ಎಂಬ ಸತ್ಯ ಇದಕ್ಕಾಗಿ ಅವಳು ಬಹಳ ಮುತುವರ್ಜಿವಹಿಸಿ ರಾಜಕೀಯದಲ್ಲಿ ಅರ್ಥಪೂರ್ಣವಾಗಿ ಪ್ರವೇಶಿಸಬೇಕಾಗಿದೆ ಇದಕ್ಕಾಗಿ ಇರುವ ಪ್ರಾರಂಭಿಕ ತೊಡಕುಗಳನ್ನು ಅವಳು ಮೊದಲು ಪರಿಹರಿಸಿ ಕೊಳ್ಳಬೇಕಿದೆ.

### ಮಹಿಳೆಯರ ಸಾಮುದಾಯಿಕ ಸಹಭಾಗಿತ್ವ–ರಾಜಕೀಯ ಪ್ರವೇಶ:

ಸ್ಥಳಿಯವಾಗಿ ಹೆಚ್ಚು ಹೆಚ್ಚು ರಾಜಕೀಯ ಜಾಗೃತಿ ಗಳಿಸಿಕೊಳ್ಳಲು ಮಹಿಳೆಯರ ಸಾಮುದಾಯಿಕ ಸಹಭಾಗಿತ್ವ ಅನಿವಾರ್ಯ ಎಂಬುದನ್ನು ಅರಿತ ರಾಜ್ಯ ಸರ್ಕಾರ ಹಲವು ಕಾನೂನುಗಳನ್ನು ಜಾರಿಗೊಳಿಸಿದೆ. ಸ್ಥಳಿಯ ಆಡಳಿತದ ಕಾನೂನುಗಳು, ಪೌರಾಡಳಿತದ ಕಾನೂನುಗಳು, ಗ್ರಾಮ ಪಂಚಾಯಿತಿ ಕಾನೂನುಗಳು ಇತ್ಯಾದಿಗಳು ಇವೆ. ಆದರೆ ಅವುಗಳ ಬಗ್ಗೆ ನಿರ್ದಿಷ್ಟತೆ ಇಲ್ಲದಿರುವುದು ಮಹಿಳೆಯ ರಾಜಕೀಯ ಪ್ರವೇಶಕ್ಕೆ ಮೊದಲ ತೊಡಕಾಗಿದೆ. ಇತ್ತಿಚೀನ ವರ್ಷಗಳಲ್ಲಿ ಮಹಿಳಾ ಸಬಲೀಕರಣದ ಕುರಿತು ವ್ಯಾಖ್ಯೆಗಳು ಬದಲಾಗುತ್ತಿವೆ. ಆಡಳಿತದ ವಿವಿಧ ಹುದ್ದೆಗಳನ್ನು ನಿರ್ವಹಿಸುವ ಅವಕಾಶಗಳು ಹೆಚ್ಚಾಗಿದೆ. ಅವಳಿಗೆ ಆಡಳಿತದ ಎಲ್ಲ ಮಜಲುಗಳಲ್ಲಿ ತೊಡಗಿಕೊಳ್ಳುವಿಕೆಗೆ ಇರುವ ಸಮಸ್ಯೆಗಳ ಮತ್ತು ಮಹಿಳೆಯರ ಸಂರಕ್ಷಣೆ ಕುರಿತು ಇರುವ ನೈಜ ಕಾನೂನಾತ್ಮಕ ತೊಡಕುಗಳು ಅವಳಿಗೆ ಅರ್ಥವಾಗುತ್ತವೆ, ಆದರೆ ಇದನ್ನು ಜಾರಿಗೆ ತರಲು ಅವಳಿಗೆ ರಾಜಕೀಯದ ನೆರವು ಬೇಕು ಮತ್ತು ಮಹಿಳಾ ರಾಜಕೀಯ ಪ್ರವೇಶ ಹೆಚ್ಚಾಗಬೇಕಿದೆ.

### ರಾಜಕೀಯ ಸ್ವಯಂ ಜಾಗೃತಿ:

ರಾಜಕೀಯವಾದ ಸ್ವಯಂ ಜಾಗೃತಿ ಸ್ತ್ರೀಯರಲ್ಲಿ ಮೂಡಿದಾಗ ಮಾತ್ರ ಮಹಿಳೆ ಸಂಪೂರ್ಣವಾಗಿ ಸಬಲೀಕರಣಗೊಳ್ಳುತ್ತಾಳೆ ಎಂಬುದು ರಾಜ್ಯಶಾಸ್ತ್ರಜ್ಞರ ಅಭಿಪ್ರಾಯ. ಮಹಿಳೆಯರ ಯಾವುದೇ ಸಮಸ್ಯೆಗಳಿಗೆ ನಿರೀಕ್ಷಿತ ಪರಿಹಾರವನ್ನು ಕೊಡಲು ರಾಜಕೀಯವಾಗಿ ಮಹಿಳೆಯರ ಪ್ರಾತಿನಿಧ್ಯ ಹೆಚ್ಚಬೇಕು ಅಥವಾ ಅವಳ ಅಭಿಪ್ರಾಯಗಳನ್ನು ಕೇಳುವಂತಹ ರಾಜಕೀಯ ಪ್ರಭುತ್ವವಿರಬೇಕು. ನಮ್ಮ ದೇಶದ ಮಹಿಳಾ ಮತದಾರರು ಕಟ್ಟುನಿಟ್ಟಿನ ಆಡಳಿತವನ್ನೂ, ಆಡಳಿತದಲ್ಲಿ ದಕ್ಷತೆಯನ್ನೂ ತರಲು ಮುಂದಾಗುವ ರಾಜಕೀಯ ವಾತಾವರಣ ಸೃಷ್ಟಿಯಾಗಬೇಕು.

### ಕಾನೂನು ಪರಿಹಾರಕ್ಕೆ ಹೆಚ್ಚಿದ ಬಲ:

ದೈನಂದಿನ ಆಡಳಿತದಲ್ಲಿ ಕಾರ್ಯ ಕ್ಷಮತೆಯನ್ನೂ, ಮಹಿಳೆಗೆ ಕಾನೂನಿನ ಪರಿಹಾರದಲ್ಲಿ ಶೀಘ್ರಗತಿಯನ್ನು ತರಲು ಮುಂದಾಗುವುದು ಮಹಿಳಾ ಪ್ರಾತಿನಿಧ್ಯ ಹೆಚ್ಚಿದಾಗ ಮಾತ್ರ. ಇಂತಹ ರಾಜಕೀಯವಾಗಿ ಬಲಾಢ್ಯ ಮಹಿಳೆಯರ ಮೂಲಕ ಅಸಂಖ್ಯಾತ ಸಾಮಾನ್ಯ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ದುರ್ಬಲ ಮಹಿಳೆಯರ ಬದುಕು ಹಸನಾಗಬಲ್ಲದು. ಇದಕ್ಕಾಗಿ ಅವಳು ದೇಶದ ರಾಜಕೀಯದ ಗತಿ ನಿರ್ಧರಿಸುವ ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ರಾಜಕೀಯವಾಗಿ ಪುರುಷರಷ್ಟೇ ಸಮಾನವಾದ ಪ್ರಾತಿನಿಧ್ಯ ಪಡೆದುಕೊಳ್ಳಬೇಕು.

### ಮೌಲ್ಯ ವರ್ಧಿತ ರಾಜಕೀಯ ಜ್ಞಾನದ ಅವಶ್ಯಕತೆ –

ಆದರೆ ಇತ್ತಿಚಿನ ದಿನಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಜನಸಂಖ್ಯೆಯನ್ನು ಆಧರಿಸಿ ಹೇಳುವುದಾದರೆ ಎಲ್ಲಾ ದೊಡ್ಡ ಮತ್ತು ಸಣ್ಣ ರಾಜಕೀಯ ಪಕ್ಷಗಳಲ್ಲಿ ಮಹಿಳಾ ಉಮೇದುವಾರಿಕೆಯ ಕೊರತೆಯು ಎದ್ದು ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳೆಯರು ಸಾಮೂಹಿಕವಾಗಿ ಎಚ್ಚೆತ್ತು ಕೊಂಡುವೈಯುಕ್ತಿಕವಾಗಿ ರಾಜಕೀಯ ನಿರಾಸಕ್ತಿ ಕಳೆದು ಕೊಂಡು ಮೌಲ್ಯ ವರ್ಧಿತ ರಾಜಕೀಯ ಜ್ಞಾನ ಪಡೆಯ ಬೇಕಿದೆ. ಇದರಿಂದ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದು ಸರಳವೂ ತರ್ಕಬದ್ಧವೂ ಆಗುತ್ತದೆ.

### ಮತದಾನದ ಮಹತ್ವದ ಜ್ಞಾನದ ಅವಶ್ಯಕತೆ:

ರಾಷ್ಟ್ರೀಯ ರಾಜಕೀಯ ಪಕ್ಷಗಳು ಮಹಿಳೆಯರು ಕುರಿತು ಉದ್ದುದ್ದ ಭಾಷಣಗಳನ್ನು ಮಾಡುತ್ತಾ ಚುನಾವಣೆಗಳಲ್ಲಿ ಅವಳ ಪಾಲ್ಗೊಳ್ಳುವಿಕೆಯನ್ನು ಮಾತ್ರ ಕೇಂದ್ರೀಕರಿಸುತ್ತವೆ. ಆದರೆ ಚುನಾವಣೆಯಲ್ಲಿ ಉಮ್ಮೇದುವಾರಿಕೆ ನೀಡುವಾಗ ಪುರುಷರಿಗೆ ಆದ್ಯತೆ ನೀಡುತ್ತವೆ.  ಮಹಿಳಾ ರಾಜಕೀಯ ಪ್ರಾಥಿನಿಧ್ಯ ಹೆಚ್ಚಿಸುವ ಕುರಿತು ಅಭಿಯಾನಗಳನ್ನು ಮಾಡುತ್ತಾ ಚುನಾವಣಾ ಭಾಷಣಗಳನ್ನೂ ಮಾಡುವ ರಾಷ್ಟ್ರೀಯ ನಾಯಕರು ಟಿಕೆಟು ಹಂಚಿಕೆ ವಿಷಯದಲ್ಲಿ ಮೌನ ವಹಿಸುವುದು ಕಂಡು ಬರುತ್ತಿದೆ. ಮತದಾನದ ಪ್ರಕ್ರಿಯೆಯಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವ ಮೂಲಕ ಮೂಲಕ ಅವಳಲ್ಲಿ ರಾಜಕೀಯ ಪ್ರೇರಣಾ ಶಕ್ತಿಯನ್ನೂ, ವರ್ಚಸ್ಸನ್ನೂ, ಸ್ವಯಂ ತೇಜಸ್ಸನ್ನೂ, ವಾಕ್ಪಟುತ್ವನ್ನೂ, ಆತ್ಮಾಭಿಮಾನವನ್ನೂ ಹೆಚ್ಚಿಸುವುದು ಸಾಧ್ಯವಾಗುತ್ತದೆ.  ಚುನಾವಣೆಗಳಲ್ಲಿ ಸಕ್ರಿಯವಾಗಿ ಮತದಾನ ಮಾಡುವ ಮೂಲಕ, ಉಮ್ಮೇದುವಾರಿಕೆಗೆ ಪ್ರಬಲ ಸ್ಪರ್ದೆ ಒಡ್ಡುವ ಮೂಲಕ ಮಹಿಳೆ ತನ್ನ ರಾಜಕೀಯ ನಿಲುವುಗಳನ್ನು ಮತ್ತು ಪಾತ್ರಗಳ'ನ್ನು ಸರಿಯಾಗಿ ಪೋಷಿಸಿಕೊಳ್ಳಬೇಕಿದೆ.  ಮಹಿಳಾ ಸುರಕ್ಷತೆ ವಿಷಯಗಳು, ಸ್ವಯಂ ರಕ್ಷಣೆ ವಿಷಯಗಳು ಮತ್ತು ಮಹಿಳಾ ಸಂಸ್ಕಾರ ಆಧರಿತ ಮೌಲ್ಯಗಳು ಸಮಾಜದಲ್ಲಿ ನೆಲೆ ಗೊಳ್ಳುವುದು ಮಹಿಳೆಯರ ಇಂತಹ ಸಾಮೂಹಿಕ ಸ್ವಯಂ ಜಾಗೃತಿಯಿಂದ ಮಾತ್ರ ಎಂಬುದನ್ನು ಅರಿತು ಮಹಿಳೆ ರಾಜಕೀಯದಲ್ಲಿ ಪೂರ್ಣವಾಗಿ ಪಾಲ್ಗೊಳ್ಳಬೇಕು. ಅದಕ್ಕೆ ಇರುವ ಕೌಟುಂಬಿಕ ತೊಡಕುಗಳನ್ನು, ಸಾಮಾಜಿಕ ತಿರಸ್ಕಾರವನ್ನೂ, ಆರ್ಥಿಕ ಹಿಂಜರಿತವನ್ನು ಅವಳು ನಿವಾರಿಸಿ ಕೋಳ್ಳ ಬೇಕು. ಮಹಿಳಾ ಸ್ವ ಸಹಾಯ ಸಂಘಗಳೂ ಎನ್ ಜಿ ಓ ಗಳು ಮತ್ತು ಇತರೆ ಸಂಘ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿ ಮಹಿಳೆಯರಲ್ಲಿ ರಾಜಕೀಯ ಜಾಗೃತಿ ಮೂಡಿಸುವ ಕೆಲಸಕ್ಕೆ ಮುಂದಾಗಬೇಕು. ಸಾಕ್ಷರತೆಯ ಪ್ರಮಾಣ ಹೆಚ್ಚಿಸುವುದೂ ಸೇರಿದಂತೆ ಮಹಿಳೆಯರ ಮೂಲಭೂತ ರಾಜಕೀಯ ಹಿಂಜರಿತಕ್ಕೆ ಕಾರಣಗಳೇನು ಎಂಬ ವಿಷಯ ಕುರಿತು ಆಗಿರುವ ಅಧ್ಯಯನ ವರದಿಗಳ ವಿಮರ್ಶೆ ಮಾಡಿ ಅದರಂತೆ ಮುಂದಿನ ಕ್ರಮಗಳನ್ನು ಪರಾಮರ್ಶಿಸಬೇಕು. ಇದಕ್ಕೆ ಮಹಿಳೆಯರಲ್ಲಿ ಸಾಮೂಹಿಕ ರಾಜಕೀಯ ಜಾಗೃತಿ ಅತ್ಯವಶ್ಯ.

### ಸರ್ಕಾರದ ಪಾತ್ರ:

ಇದುವರೆಗೂ ಪ್ರಜಾಪ್ರಭುತ್ವದ ಸಾಫಲ್ಯತೆಗೆ ಮಹಿಳೆಯರ ಕೊಡುಗೆಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಎಡವಿರುವ ಸರ್ಕಾರಗಳ ಕುರಿತು ಹೆಚ್ಚಿನ ಸಮಸೋಧನೆಯ ಅವಶ್ಯಕತೆ ಇದೆ. ಪುರುಷ ಪ್ರಧಾನ ನೀತಿಗಳನ್ನು ಎಲ್ಲಾ ಸರ್ಕಾರಗಳು ವಿವಿಧ ರೀತಿಯಲ್ಲಿ ಪ್ರತಿಬಿಂಬಿಸಿವೆ. ಮಹಿಳಾ ಪರ ಕಾನೂನುಗಳನ್ನು ಜಾರಿಗೆ ತಂದರೂ ಅವುಗಳ ವ್ಯಾಪ್ತಿ ಮತ್ತು ಅನುಷ್ಠಾನದಲ್ಲಿ ರಾಜ್ಯ ಸರ್ಕಾರಗಳೂ ಮತ್ತು ಸ್ಥಳೀಯ ಸಂಸ್ಥೆಗಳು ಹಿಂದೆ ಬಿದ್ದಿವೆ. ಸರ್ಕಾರಗಳ ಎಲ್ಲಾ ನಿಯಮ ನೀತಿಗಳೂ ಮಹಿಳಾ ಪರವಾಗಿ ನಿಲ್ಲಬೇಕು ಮತ್ತು ಅನುಷ್ಠಾನದ ಹಂತದಲ್ಲಿಯೇ ತೊಡಕುಗಳನ್ನು ಗ್ರಹಿಸಿ ಅದರಂತೆ ಮಹಿಳೆಯರು ರಾಜಕೀಯ ವೈಫಲ್ಯತೆಗಳಿಂದ ದೂರ ಸರಿಯದಂತೆ ಎಚ್ಚರ ವಹಿಸಬೇಕು. ಸದ್ಯ ಪ್ರಜಾಪ್ರಭುತ್ವದಲ್ಲಿ ಅತೀ ಕಠಿಣವಾದ ಸವಾಲೆಂದರೆ ಸಾಕ್ಷರತೆ ಇಲ್ಲದ ಮಹಿಳೆಯರಿಗೆ ಕಾನೂನಿನ ಕಟ್ಟಳೆಗಳನ್ನು ಅರ್ಥೈಸಿಕೊಳ್ಳೂವುದಕ್ಕೆ ಇರುವ ಅಂಶಗಳನ್ನು ಸರ್ಕಾರಗಳು ವಿಮರ್ಶಿಸಿ ಸರಳವಾಗಿ ಕಾನೂನುಗಳನ್ನು ತಿಳಿದುಕೊಳ್ಳಲು  ಉಚಿತ ಕಾನೂನ ಜಾಗೃತಿ ಶಿಬಿರಗಳನ್ನು, ರಾಜಕೀಯ ಪಕ್ಷಗಳ ಒಳ ಸುಳಿಗಳನ್ನು ಅರ್ಥೈಸಿಕೊಳ್ಳುವುದೂ ಸೇರಿದಂತೆ  ರಾಜಕೀಯ ಪಕ್ಷಗಳ ಕಾರ್ಯ ವೈಖರಿಯನ್ನು ತಿಳಿದಿ ಕೊಳ್ಳುವುದು ಮೊದಲಾದ ರಾಜಕೀಯ ಪ್ರವೇಶದ ಪ್ರಾರಂಭಿಕ  ಹಂತಗಳಲ್ಲಿ ಅವಳಿಗೆ ಸೂಕ್ತ ಮಾರ್ಗದರ್ಶನದ ಅವಶ್ಯಕತೆ ಇದೆ. ಇದಕ್ಕಾಗಿ ಮಹಿಳಾ ಸ್ವ ಸಹಾಯ ಸಂಘಗಳ ಮತ್ತು ಮಹಿಳಾ ಸರ್ಕಾರೇತರ ಸಂಘ ಸಂಸ್ಥೆಗಳ ನೆರವನ್ನು ಪಡೆಯಬಹುದು. ರಾಜಕೀಯ ಜಾಗೃತಿ ಅಭಿಯಾನಗಳು ಮಹಿಳೆಯರ ಮತದಾನ ಪ್ರಮಾಣವನ್ನು ಹೆಚ್ಚಿಸಲು ನೆರೆವಾಗುವಂತೆ ಅವರ ರಾಜಕೀಯ ಉನ್ಮೆದು ವಾರಿಕೆಯನ್ನು ಹೆಚ್ಚಿಸಲೂ ನೆರವಾಗುತ್ತವೆ ಎಂಬ ಅಂಶವನ್ನು ಈ ಮಹಿಳಾ ಸಂಘಟನೆಗಳೂ ಮತ್ತು ಮಹಿಳಾ ಗುಂಪುಗಳು ತಿಳಿದು ಕೊಳ್ಳಬೇಕು.

### ಉಪ ಸಂಹಾರ:

ಮಹಿಳೆಯರು ಸಾಮೂಹಿಕ ಸ್ವಯಂ ಜಾಗೃತಿಯಿಂದ ಮಾತ್ರ ರಾಜಕೀಯ ಕ್ಷೇತ್ರದಲ್ಲಿ ಬಲ ಸಂವರ್ಧನೆ ಮಾಡಿ ಕೊಳ್ಳಬಹುದು ಎಂಬುದನ್ನು ಅರಿತು ಮಹಿಳೆ ರಾಜಕೀಯ ಪ್ರಕ್ರಿಯೆಗಳಲ್ಲಿ ಪೂರ್ಣವಾಗಿ ಪಾಲ್ಗೊಳ್ಳಬೇಕು. ಪ್ರಜಾಪ್ರಭುತ್ವದ ಮುಖ್ಯ ಸಾಫಲ್ಯತೆ ಮಹಿಳೆಯರ ಸ್ವಯಂ ಜಾಗೃತಿಯ ಮೇಲೆಯೇ ನಿಂತಿದೆ. ಭಾರತದ ಸಾಂಸ್ಕೃತಿಕ ಬಹುತ್ವದ ದೇಶವು

ಮುಂದೆಯೂ ವಿಶ್ವ ಗುರುವಾಗಿ ಹೊರ ಹೊಮ್ಮ ಬೇಕಾದರೆ ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಹೆಚ್ಚಾಗಬೇಕು. ರಾಜಕೀಯ ಪಕ್ಷಗಳು ಈ ನಿಟ್ಟಿನಲ್ಲಿ ಸಕ್ರಿಯವಾಗಿ ಚಿಂತಿಸಿ ಹೊಸ ಕ್ರಮಗಳನ್ನು ತರಲು ಮುಂದಾಗ ಬೇಕು. ಸಮಾಜದ ಎಲ್ಲಾ ಭಾಗೀದಾರರು ಈ ನಿಟ್ಟಿನಲ್ಲಿ ಮುತುವರ್ಜಿವಹಿಸಿದರೆ ಮಾತ್ರ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆಗೆ ಅರ್ಥ ಬರುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಅಕ್ಷಯ್‌ಕುಮಾರ್ – ಕಾವ್ಯ, ರಾಜಕೀಯ ಮತ್ತು ಸಂಸ್ಕೃತಿ, ಭಾರತೀಯ ಪಠ್ಯಗಳು ಮತ್ತು ಸಂದರ್ಭಗಳ ಕುರಿತು, ರೂಟಲೆಡ್ಜ್ ಪ್ರಕಾಶನ, 2014.
2. ರಿಪೋರ್ಟ್ ಆನ್ ದಿ ಜೆಂಡರ್ ರಿಸೋರ್ಸ್ ಸೆಂಟರ್, ಅಧಿಕೃತ ಜಾಲ ತಾಣ 2026.
3. ರಿಪೋರ್ಟ್ ಆನ್ ದಿ ಚೈಲ್ಡ್ ಅಂಡ್ ವುಮೆನ್ ವೆಲ್‌ಫೇರ್ ಇನ್ ಇಂಡಿಯಾ, ಭಾರತ ಸರ್ಕಾರದ ಪ್ರಕಟಣೆ 2021.
4. ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಮಹಿಳಾ ವರದಿ ಬೆಂಗಳೂರು ಅಧಿಕೃತ ಜಾಲ ತಾಣ 2026.
5. ಕನ್ನಡ ವಿಶ್ವ ಕೋಶ, ಮೈಸೂರು ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು, 2000
6. ಕನ್ನಡ ವಿಷಯ ವಿಶ್ವ ಕೋಶ ಮೈಸೂರು ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು, 2000
7. ಡಾ, ಎನ್, ಸಿಂಗ್ – ಕರ್ನಾಟಕದಲ್ಲಿ ದಲಿತರು ಮತ್ತು ಸರ್ಕಾರದ ಆಶಯಗಳು – ದಿ ಹಿಂದೂ ಪತ್ರಿಕೆ ದಿನಾಂಕ 05–09–2018
8. ಡಿಜಿಟಲ್ ಯುಗದಲ್ಲಿ ಮಹಿಳೆಯ ಅಭಿವೃದ್ಧಿ, ಭಾರತ ಸರ್ಕಾರದ ವರದಿ 2019–2020
9. ಗಣೇಶ್ ಮೂರ್ತಿ – ಎಂಪವರ್‌ಮೆಂಟ್ ಆಫ್ ವುಮೆನ್ ಇನ್ ಇಂಡಿಯಾ, ನ್ಯೂ ಸೆಂಚುರಿ ಪಬ್ಲಿಕೇಶನ್ಸ್, 2014
10. ಪ್ರಜಾ ಪ್ರಭುತ್ವದ ಪ್ರಾತಿನಿಧ್ಯ ಸಮಾನತೆ ಮತ್ತು ಭಾಗವಹಿಸುವಿಕೆ, ಅಂತರ್ಜಾಲ 2025
11. ಲಕ್ಷ್ಮಮ್ಮ ಎಮ್ – ಎಂಪವರ್‌ಮೆಂಟ್ ಆಫ್ ವುಮೆನ್, ಸೀರಿಯಲ್ ಪಬ್ಲಿಕೇಶನ್ಸ್, 2014
12. ವಾಜೀರಾಂ ಮತ್ತು ರವಿ – ಪ್ರಜಾಪ್ರಭುತ್ವದ ಫಲಿತಗಳು, 2025
13. ಕರ್ನಾಟಕ ಸರ್ಕಾರದ ಇಲಾಖೆಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 2025